

ಬಿಸಿಲು ಬೆಳದಿಂಗಳು
ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಚಿರನಿದ್ರೆಯಲ್ಲಿರುವ 'ಬಾಳ ಗೆಳೆಯರು'

ಅದೊಂದು ರುದ್ರಭೂಮಿ. ಆದರೆ ಸ್ಮಶಾನದ ಭಯಾನಕತೆ, ಭೀಕರತೆ ಅಲ್ಲಿರಲಿಲ್ಲ. ಭೂತಪ್ರೇತಗಳ ಆವಾಸವೂ ಅದಾಗಿರಲಿಲ್ಲ. ನೋಡಲು ಸುಂದರವಾದ ಉದ್ಯಾನವನದಂತಿತ್ತು. ವಿಶಾಲವಾದ ಆದರೆ ತಗ್ಗುದಿಣ್ಣೆಗಳಿಂದ ಕೂಡಿದ ಬೆಟ್ಟದ ತಪ್ಪಲಿನ ಜಾಗ. ಸುಲಭವಾಗಿ ಮೇಲೇರಲು ಸಹಾಯಕವಾಗಿದ್ದ ಚಿಕ್ಕ ಚಿಕ್ಕ ಕಲ್ಲಿನ ಪಾವಟಿಗೆಗಳು. ದೂರದಲ್ಲಿ ವೃದ್ಧ ಮಹಿಳೆಯೊಬ್ಬಳು ಕೈಯಲ್ಲಿ ಕ್ಯಾನ್ ಹಿಡಿದು ಹೂಗಿಡಗಳಿಗೆ ನೀರುಣಿಸುತ್ತಿದ್ದಳು. ಹಸಿರು ಹುಲ್ಲಿನ ಹಾಸು. ಎತ್ತ ನೋಡಿದೊಡತ್ತ ಕಣ್ಣಿಗೆ ಕಂಗೊಳಿಸುವ ಬಗೆ ಬಗೆಯ ಬಣ್ಣದ ಹೂವುಗಳು. ಮೈಗೆ ಹಿತಕರವಾಗಿದ್ದ ಬೆಳಗಿನ ಎಳೆ ಬಿಸಿಲು. ಆಹ್ಲಾದಕರವಾಗಿ ಬೀಸುತ್ತಿದ್ದ ಮಂದಮಾರುತ. ಮಹಾಕವಿ ಕಾಳಿದಾಸ ಮೇಘದೂತದಲ್ಲಿ ಬಣ್ಣಿಸುವ 'ಮಂದಂ ಮಂದಂ ನುದತಿ ಪವನಃ' ಎಂಬ ಶ್ಲೋಕದ ಸಾಲು ನೆನಪಾಯಿತು. ಚಾಮರ ಬೀಸಿದಂತೆ ಓಲಾಡುತ್ತಿದ್ದ ಗಿಡಮರಗಳ ಕೊಂಬೆಗಳು. ಅವುಗಳ ಮೇಲೆ ಚಿಲಿಪಿಲಿಗುಟ್ಟುತ್ತಿದ್ದ ಹಕ್ಕಿಗಳ ಕಲರವ. ವನದೇವತೆಯ ಸಿರಿಸೊಬಗೇ ಅಲ್ಲಿ ಮೈದಾಳಿದಂತಿತ್ತು! ಸುತ್ತಲೂ ಸಾವಿರಾರು ಸಮಾಧಿಗಳು. ಅವುಗಳ ಮೇಲೆ ನಿರ್ಮಿಸಿದ್ದ ಆಕರ್ಷಕ ಆಕೃತಿಯ ಸಮಾಧಿ ಕಲ್ಲುಗಳು. ಮಲ್ಲಿಗೆಯ ಹೂವಿನಂತಿದ್ದ ಅಮೃತಶಿಲೆ, ನಸುಗೆಂಪಿನ ಗುಲಾಬಿಯಂತಿದ್ದ ಗ್ರಾನೈಟ್‌ಕಲ್ಲು, ಅವುಗಳ ವಿನ್ಯಾಸದಲ್ಲಿ ಒಂದು ಮತ್ತೊಂದನ್ನು ಮೀರಿಸುವ ಸೊಬಗು!

ಸಮಾಧಿಯೊಂದರ ಹತ್ತಿರ ಹೋದಾಗ ಕಣ್ಣಿಗೆ ಬಿದ್ದ ಒಂದು ದೊಡ್ಡ ಶಿಲಾಫಲಕದ ಮೇಲಿದ್ದ ಬರಹ: "Here sleep our Lifetime Friends"! (ಇಲ್ಲಿ ನಿದ್ರಿಸುತ್ತಿದ್ದಾರೆ ನಮ್ಮ ಬಾಳ ಗೆಳೆಯರು). ಹಾಗೆಯೇ ಒಂದು ಹೆಜ್ಜೆ ಮುಂದೆ ಇಟ್ಟಾಗ ಕಂಡು ಬಂದ ಇನ್ನೊಂದು ಬರಹ: "Here sleeps our darling. We miss you terribly"! ಹೀಗೆ ಒಂದೇ ಎರಡೇ. ಹೆಜ್ಜೆ ಹೆಜ್ಜೆಗೂ ಹರಿದ ಹೃದಯದ ಭಾವನೆಗಳ ಕಾವ್ಯಧಾರೆ! ಅಗಲಿದ ಜೀವಗಳ ಬಗ್ಗೆ ಇದ್ದ ಮಧುರ ಭಾವನೆಗಳು ಆರ್ದ್ರಗೊಂಡು ಸಂಬಂಧವಿಲ್ಲದವರ ಹೃದಯವನ್ನೂ ತಟ್ಟುವಂತಿದ್ದ ಮನಮಿಡಿಯುವ ಬರಹಗಳು. ಅವು ಅಗಲಿಹೋದ ಪ್ರೀತಿಯ ತಂದೆ-ತಾಯಿ, ಅಣ್ಣ-ತಮ್ಮ, ಅಕ್ಕ-ತಂಗಿ, ಮಡದಿ-ಮಕ್ಕಳನ್ನು ಕುರಿತು ಬರೆದ ಹೃದಯಸ್ಪರ್ಶಿ ಮಾತುಗಳೆಂದು ನೀವು ಊಹಿಸಿದರೆ, ನಿಮ್ಮ ಊಹೆ ತಪ್ಪು. ಅದು ರುದ್ರಭೂಮಿಯೇನೋ ಸರಿ, ಆದರೆ ಅಲ್ಲಿ ಸಮಾಧಿ ಮಾಡಿರುವುದು ಮನುಷ್ಯರನ್ನಲ್ಲ, ನಾಯಿ, ಬೆಕ್ಕು, ಮತ್ತಿತರ ಸಾಕು ಪ್ರಾಣಿಗಳನ್ನು! ಪ್ರೀತಿಯಿಂದ ಸಾಕಿದ ಆ ಪ್ರಾಣಿಗಳ ಹೆಸರು ಮತ್ತು ಸತ್ತ ದಿನಾಂಕವನ್ನು ಆ ಸಮಾಧಿ ಕಲ್ಲುಗಳ ಮೇಲೆ ಕೆತ್ತಲಾಗಿತ್ತು.

ಹೀಗೆ ಸತ್ತ ಸಾಕು ಪ್ರಾಣಿಗಳನ್ನು ಸಮಾಧಿಮಾಡಲು ಸ್ಥಾಪಿತವಾದ ವಿಶ್ವದ ಮೊಟ್ಟ ಮೊದಲ ರುದ್ರಭೂಮಿಯೇ 1896 ರಲ್ಲಿ ನ್ಯೂಯಾರ್ಕ್‌ನಲ್ಲಿ ಸ್ಥಾಪಿತವಾದ "Hartsdale Pet Cemetery and Crematory". ಇದು ಪ್ರವಾಸಿಗರ ತಾಣವೇನೂ ಅಲ್ಲ. ಕಳೆದ ತಿಂಗಳು ನ್ಯೂಯಾರ್ಕ್‌ನಲ್ಲಿ ಶಿಷ್ಯರಾದ ಡಾ. ಚಂದ್ರಪ್ಪ ಬಾಳೇಕಾಯಿಯವರ ಮನೆಯಲ್ಲಿ ವಾಸ್ತವ್ಯವಿದ್ದಾಗ ಮಾತಿನ ಪ್ರಸಂಗದಲ್ಲಿ ಅವರ ಶ್ರೀಮತಿ ಸಾವಿತ್ರಿಯವರಿಂದ ಇದರ ವಿಚಾರ ತಿಳಿಯಿತು. ಅದನ್ನು ನೋಡಬೇಕೆಂಬ ನಮ್ಮ ಒತ್ತಾಸೆಯಿಂದ ದಂಪತಿಗಳು ಅವರ ಮನೆಯ ಸಮೀಪದಲ್ಲಿಯೇ ಇರುವ ಈ ರುದ್ರಭೂಮಿಗೆ ನಮ್ಮನ್ನು ಕರೆದುಕೊಂಡು ಹೋಗಿದ್ದರು. ಮೊದಲು ಈ ಸ್ಥಳವು ಒಂದು ಸೇಬುಹಣ್ಣಿನ ತೋಟವಾಗಿತ್ತು. ಅದರ ಮಾಲೀಕನಾದ Dr. Samuel Johnson ತನ್ನ ಗೆಳೆಯನ ಸಾಕು ನಾಯಿ ಸತ್ತಾಗ ಅದನ್ನು ಸಮಾಧಿ ಮಾಡಲು ಇಲ್ಲಿ ಸ್ಥಳಾವಕಾಶ ಮಾಡಿಕೊಟ್ಟ. ಕ್ರಮೇಣ ಇದು ಪ್ರೀತಿಯಿಂದ ಸಾಕುಪ್ರಾಣಿಗಳನ್ನು ಸಾಕಿದವರೆಲ್ಲರಿಗೂ ತಮ್ಮ ಪ್ರೀತಿಯನ್ನು ಜತನದಿಂದ ಕಾಪಿಡುವ ತಾಣವಾಯಿತು. ಕಳೆದ ಒಂದು ಶತಮಾನದ ಅವಧಿಯಲ್ಲಿ ಸುಮಾರು 70 ಸಾವಿರಕ್ಕೂ ಹೆಚ್ಚು ಸಾಕುಪ್ರಾಣಿಗಳನ್ನು ಇಲ್ಲಿ ಸಮಾಧಿ ಮಾಡಲಾಗಿದೆ.

1914 ರಿಂದ 1918 ರವರೆಗೆ ನಡೆದ ಮೊದಲ ಮಹಾಯುದ್ಧದಲ್ಲಿ ಯೋಧರಿಗೆ ನಾಯಿಗಳಿಂದ ದೊರೆತ ನೆರವು ಅಪಾರ. ನಾಯಿ ಬೊಗಳುವುದು ಸಹಜ. ಆದರೆ ಯುದ್ಧ ತಂತ್ರಗಳಲ್ಲಿ ಪಳಗಿದ ನಾಯಿಗಳು ನಿಶ್ಶಬ್ದವಾಗಿ ಕಾರ್ಯಾಚರಣೆ ಮಾಡಿ ವೈರಿಗಳನ್ನು ಸದೆಬಡಿಯಲು ಸೈನಿಕರಿಗೆ ನೆರವಾಗುತ್ತಿದ್ದುವಂತೆ. ಸೈನಿಕರು ತಲುಪಲು ಸಾಧ್ಯವಾಗದ ದುರ್ಗಮ ಹಾಗೂ ಅಪಾಯಕಾರಿ ಸ್ಥಳಗಳಿಗೆ ಹೋಗಿ ತಮ್ಮ ಪ್ರಾಣವನ್ನೇ ಪಣಕ್ಕೊಡ್ಡಿ ಅನೇಕ ಸಾಹಸ ಕಾರ್ಯಗಳನ್ನು ಮಾಡಿದವು. ಅವುಗಳ ಧೈರ್ಯ, ಸಾಹಸ ಹಾಗೂ ನಿಸ್ವಾರ್ಥ ಸೇವೆಯನ್ನು ಸ್ಮರಿಸಿ 1923 ರಲ್ಲಿ "The War Dog" ಎಂಬ ಒಂದು ವಿಶೇಷ ಸ್ಮಾರಕವನ್ನು ಈ ರುದ್ರಭೂಮಿಯಲ್ಲಿ ನಿರ್ಮಿಸಲಾಯಿತು. ಹತ್ತು ಅಡಿ ಎತ್ತರದ ಗ್ರಾನೈಟ್ ಕಲ್ಲಿನ ಮೇಲೆ ತಲೆ ಎತ್ತಿ ನಿಂತಿರುವ ಷೆಫರ್ಡ್ ಜಾತಿಯ ನಾಯಿಯೊಂದರ ಭವ್ಯವಾದ ಕಂಚಿನ ಪ್ರತಿಮೆ ಅದು. ಅದರ ಕೆಳಗೆ "Dedicated to the memory of the War Dog, man's most faithful friend for the valiant services rendered in the World War 1914-1918" ಎಂದು ಬರೆಯಲಾಗಿದೆ. ಮಹಾಯುದ್ಧದಲ್ಲಿ ಪಾಲ್ಗೊಂಡಿದ್ದ ಎಲ್ಲ ದೇಶದ ಪ್ರತಿನಿಧಿಗಳೂ ಈ ಸ್ಮಾರಕದ ಅನಾವರಣ ಸಂದರ್ಭದಲ್ಲಿ ಭಾಗವಹಿಸಿದ್ದರು. ಯುದ್ಧದಲ್ಲಿ ಮಡಿದ ಶ್ವಾನಗಳ ಗೌರವಾರ್ಥ ಪ್ರತಿವರ್ಷ ಜೂನ್ ತಿಂಗಳ ಮಧ್ಯಭಾಗದಲ್ಲಿ ಈ ರುದ್ರಭೂಮಿಯಲ್ಲಿ ವಿಶೇಷ ಕಾರ್ಯಕ್ರಮವನ್ನು ನಡೆಸಲಾಗುತ್ತದೆ.

ಪ್ರಾಣಿಗಳಲ್ಲಿ ಇರುವುದು ಮೃಗೀಯ ಗುಣ ಮಾತ್ರ ಅಲ್ಲ, ಮಾನವನೂ ಸಹ ನಾಚಿಕೆಯಿಂದ ತಲೆ ತಗ್ಗಿಸುವಷ್ಟು ಮಾನವೀಯತೆಯೂ ಇರುತ್ತದೆ ಎಂದು ಹೇಳಲು ಹಿಂಜರಿಯಬೇಕಾಗಿಲ್ಲ: ಒಮ್ಮೆ ಕೆನಡಾ ದೇಶದ ಸದ್ಗೃಹಸ್ಥನೊಬ್ಬ ತನ್ನ ಬಿಡುವಿನ ವೇಳೆಯಲ್ಲಿ ಮನೆಯ ಮುಂದಿರುವ ಕೈತೋಟದಲ್ಲಿ ಕೆಲಸ ಮಾಡುತ್ತಿದ್ದ. ಅವನ ಪುಟ್ಟ ಮಗು ಅಂಗಳದಲ್ಲಿ ಆಟವಾಡುತ್ತಿತ್ತು. ಸ್ವಲ್ಪ ಹೊತ್ತಿನಲ್ಲಿಯೇ ಮಗು ಆಡುತ್ತಾ ಆಡುತ್ತಾ ತೆರೆದ ಗೇಟನ್ನು ದಾಟಿ ರಸ್ತೆಯ ಮಧ್ಯಕ್ಕೆ ಹೋಗಿಬಿಟ್ಟಿತು. ಕೈತೋಟದ ಕೆಲಸದಲ್ಲಿ ಮಗ್ನನಾಗಿದ್ದ ತಂದೆ ಗಮನಿಸಲಿಲ್ಲ. ರಸ್ತೆಯಲ್ಲಿ ಕಾರೊಂದು ವೇಗವಾಗಿ ಬರುತ್ತಿತ್ತು. ಮನೆಯ ಮುಂಬಾಗಲಲ್ಲಿ ಕುಳಿತಿದ್ದ ಅವನ ಸಾಕು ನಾಯಿ ಅದನ್ನು ಗಮನಿಸಿ ಚಂಗನೆ ಹಾರಿ ಮಗುವನ್ನು ರಸ್ತೆಯ ಇನ್ನೊಂದು ಬದಿಗೆ ನೂಕಿತು. ಸಣ್ಣಪುಟ್ಟ ಗಾಯಗಳೊಂದಿಗೆ ಮಗು ಪಾರಾಯಿತು. ಆದರೆ ದುರದೃಷ್ಟವಶಾತ್ ಆ ಸಾಕುನಾಯಿ ಮಗುವನ್ನು ಕಾಪಾಡುವ ಪ್ರಯತ್ನದಲ್ಲಿ ರಭಸವಾಗಿ ಬರುತ್ತಿದ್ದ ಕಾರಿನ ಚಕ್ರದಡಿ ಸಿಕ್ಕು ರಕ್ತದ ಮಡುವಿನಲ್ಲಿ ವಿಲವಿಲನೆ ಒದ್ದಾಡಿ ಸತ್ತುಹೋಯಿತು. ತನ್ನ ಪ್ರಾಣ ತೆತ್ತು ತನ್ನೊಡೆಯನ ಮಗುವಿನ ಪ್ರಾಣ ಉಳಿಸಿತ್ತು!

ಎಲ್ಲಿಯೋ ಓದಿದ ನೆನಪು. ಸಮುದ್ರದಲ್ಲಿದ್ದ ಮರಿಮೀನು ಮತ್ತು ತಾಯಿಮೀನಿನ ಮಧ್ಯೆ ನಡೆದ ಸಂಭಾಷಣೆ:

ಮರಿ ಮೀನು: "Mom, tell me why we cannot live on earth?"
ತಾಯಿ ಮೀನು: "Oh, my kid, earth is made for selfish, not for fish!"

9.8.2012

ಶ್ರೀ ತರಳಬಾಳು ಜಗದ್ಗುರು
ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ

❑